ಈ) ಕೇಂದ್ರ ಸರ್ಕಾರದಿಂದ ಏನಾದರೂ ಸಹಾಯವನ್ನು ಕೇಳಲಾಗಿದೆಯೇ ಹಾಗಿದ್ದಲ್ಲಿ ಅದರ ಪರಿಣಾಮವೇನು;

ಉ) ಅಂದಾಜು ಬೀಳು ನಾಶವಾದದ್ದರ ಮೊತ್ತವೇನು?

ಉತ್ತರ ; ವಿ ಎಲ್ ಪಾಟೀಲ್ (ಕಂದಾಯ ಮಂತ್ರಿಗಳು) — ಅ) 3318 ಕುಟುಂಬಗಳು ಒಳಪಟ್ಟಿವೆ ಮತ್ತು 9 ಜನರು ಮೃತ ಪಟ್ಟಿರುತ್ತಾರೆ.

ಆ) 9 ಜನರು ಮೃತಪಟ್ಟಿರುವರು ಮತ್ತು ಒಟ್ಟು ಪಾನಿಯಾದ ಆಸ್ತಿಯ ಅಂದಾಜು ರೂ. 263-66 ಲಕ್ಷವಿದೆ.

ಇ) ಕರ್ನಾಟಕ ಸರ್ಕಾರವು ಈವರೆವಿಗೆ ರೂ 75-00 ಲಕ್ಷ ನೊಂದ ಕುಟುಂಬದವರಿಗೆ ಪರಿಹಾರ ಹಾಗೂ ವಸತಿಗಾಗಿ ಹಣವನ್ನು ಬಿಡುಗಡೆ ಮಾಡಲಾಗಿದೆ

ಈ) ಕರ್ನಾಟಕ ಸರ್ಕಾರವು ಕೇಂದ್ರ ಸರ್ಕಾರಕ್ಕೆ ನೆರೆ ಹಾವಳಿಯ ಬಗ್ಗೆ ಪ್ರಸ್ತಾವನೆಯನ್ನು ದಿನಾಂಕ 19-7-83ರಂದು ಸಲ್ಲಿಸಿ ರೂ. 7.60ಕೋಟಿ ರೂಪಾಯಿಗಳನ್ನು ಕೇಳಿರುವರು ಈವರೆವಿಗೂ ಹಣವು ಬಂದಿರುವುದಿಲ್ಲ. ಆದರೆ ಮಾನ್ಯ ಪ್ರಧಾನ ಮಂತ್ರಿಗಳ ಪರಿಹಾರ ನಿಧಿಯಿಂದ ರೂ. 3-00 ಲಕ್ಷ ಬಿಡುಗಡೆ ಮಾಡಿದ್ದಾರೆ.

ಉ) ರೂ. 95,92,500 ಅಂದಾಜು ಮಾಡಲಾಗಿದೆ.

ಶ್ರೀ ಎಸ್ ಎಸ್. ಪಾಟೀಲ್ — ಮಾನ್ಯ ಮಂತ್ರಿಗಳು ಕೊಟ್ಟಿಂತಹ ಉತ್ತರಗಳನ್ನು ನೋಡಿ ಪಾಗ ನನಗನಿಸುತ್ತದೆ ಅವರು ಸ್ಥಳಕ್ಕೆ ಭೇಟಿಕೊಟ್ಟು ಉತ್ತರವನ್ನು ಕೊಡುತ್ತಿದ್ದಾರೋ ಅಥವಾ ಅಧಿಕಾರಿಗಳು ಕೊಟ್ಟಂತಹ ಉತ್ತರವನ್ನು ಕೊಡುತ್ತಿದ್ದಾರೋ ಎಂಬುದು ತಿಳಿಸಿದರೆ ಒಳ್ಳೆಯದು.

ಶ್ರೀ ವಿ ಎಲ್. ಪಾಟೀಲ್.— ನಮ್ಮ ಅಧಿಕಾರಿಗಳ ಜೊತೆಯಲ್ಲಿ ನಾನು ಭೇಟಿ ಮಾಡಿ ಸ್ಥಳ ವನ್ನು ಪರೀಕ್ಷೆ ಮಾಡಿ ಅಲ್ಲಿ ತೊಂದರೆಗೆ ಸಿಕ್ಕಿಹಾಕಿಕೊಂಡಿದ್ದಂಥ ಜನರನ್ನು ಹೆಲಿಕ್ಯಾಪ್ಟರ್‌ನಲ್ಲಿ ಸಾಗಿಸಿ ಬಂದಿದ್ದೇವೆ. ಮತ್ತು ಸಂಬಂಧಪಟ್ಟ ಜಿಲ್ಲಾಧಿಕಾರಿಗಳ ಜೊತೆಯಲ್ಲಿ ಕೂಡ ನಾವು ಸಮಾ ಲೋಚನೆ ಮಾಡಿದ್ದೇವೆ. ಮತ್ತು ಅಲ್ಲಿಗೆ ಬೇಕಾದಷ್ಟು ಹಣವನ್ನು ಕೂಡ ಕೊಟ್ಟಿದ್ದೇವೆ.

ಅಧ್ಯಕ್ಷರು — ಪ್ರಶ್ನೋತ್ತರ ವೇಳೆ ಮುಗಿಯಿತು.

ಪ್ರವಾಹದಿಂದಾಗಿ ರಾಮದುರ್ಗ ತಾಲ್ಲೂಕಿನ ಗ್ರಾಮಗಳನ್ನು ಸ್ಥಳಾಂತರಿಸುವುದು

ಪ್ರಶ್ನೆ : 23 (58) ಶ್ರಿ.ಎಫ್.ಎ. ಕೊಪ್ಪದ್ (ರಾಮದುರ್ಗ) — ಮಾನ್ಯ ಕಂದಾಯ ಮಂತ್ರಿ ಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ :—

ಅ) ರಾಮದ ರ್ಗ ತಾಲ್ಲೂಕಿನ ಮಲಪ್ರಭಾ ನದಿಯ ಪ್ರವಾಹಕ್ಕೆ ಒಳಗಾಗುವ ಗೊನ್ನಾವರ, ಹಂಪಿಹೋಳಿ, ಸುನ್ನಾಳ ಈ ಗ್ರಾಮಗಳನ್ನು ಸ್ಥಳಾಂತರಿಸುವ ಬಗ್ಗೆ ಸರಕಾರದವರು ಯೋಚಿಸಿ ದ್ದಾರೆಯೆ;

ಆ) ಸ್ಥಳಾಂತರಿಸುವ ಕಾರ್ಯಕ್ರಮ ಈಗ ಯಾದ ಹಂತದಲ್ಲಿದೆ ?

ಉತ್ತರ: ಶ್ರೀ ವಿ.ಎಲ್. ಪಾಟೀಲ್ (ಕಂದಾಯ ಮಂತ್ರಿಗಳು) .—ಅ) ಪರಿಶೀಲನೆಯಲ್ಲಿದೆ.

ಆ) ಗೊನ್ನಾವರ ಗ್ರಾಮದ ಸಲುವಾಗಿ ಭೂಸ್ವಾಧೀನ ಕಾಯ್ದೆಕಲಂ 11ರ ಪ್ರಕಾರ 35 ಎಕರೆ 8 ಗುಂಟೆ 15 1/2 ಆಣೆ ಜಮೀನನ್ನು ಸ್ವಾಧೀನ ಪಡಿಸಿ ಕೊಂಡು ಅವರೆಲ್ಲಿ ನಿವೇಶನಗಳನ್ನು ನಿರ್ಮಿಸಿ 1974ರಲ್ಲಿ ಗ್ರಾಮದ ಜನರಿಗೆ ಹಂಚಲಾಗಿದೆ.

ಕ್ಷೇತ್ರಾಭಿವೃದ್ಧಿ ಅಧಿಕಾರಿಗಳಿಂದ 20 ಜನತಾ ಮನೆಗಳು ಈ ಜಮೀನಿನಲ್ಲಿ ಮಂಜೂರು ಮಾಡ ಲ್ಪಟ್ಟಿರುತ್ತವೆ. ಈ ಜನರು ಅಲ್ಲಿ ಈಗ ವಾಸಿಸಿರುತ್ತಿದ್ದಾರೆ. ಉಳಿದ ಜನರಿಗೆ ಅಲ್ಲಿಗೆ ಹೋಗಿ ನಿಲ್ಲಲು ವಿನಂತಿಸಿಕೊಳ್ಳಲಾಗುತ್ತಿದೆ.

ಹಂಚಿಹೊಳಿ ಮತ್ತು ಸುನ್ನಾಳ ಗ್ರಾಮಗಳ ಸಲುವಾಗಿ ಭೂಸ್ವಾಧೀನ ಪ್ರಕರಣಗಳನ್ನು ಇನ್ನು ಪ್ರಾರಂಭ ಮಾಡಬೇಕಾಗಿದೆ. ಈ ಬಗ್ಗೆ ಸೂಕ್ತ ಕ್ರಮ ಕೂಡಲೇ ಕೈಗೊಳ್ಳಲಾಗುವುದು.

ಕರ್ನಾಟಕ ಭೂಸುಧಾರಣೆಯ ಕಾಯ್ದೆಯ ಮೇರೆಗೆ ಗೇಣಿದಾರರ ಹಕ್ಕು

ಪ್ರಶ್ನೆ : 33 (50) ಡಾ ವಿ. ಎಸ್. ಆಚಾರ್ಯ (ಉಡುಪಿ).— ಮಾನ್ಯ ಕಂದಾಯಮಂತ್ರಿ ಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ :—

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮೂಲಗೇಣಿದಾರರಿಗೆ, ಆಸ್ತಿಮೂರಾಟದ ಹಕ್ಕನ್ನು ಹಿಂದೆ ಇದ್ದುದು ಕೆ.ಎಲ್. ಆಕ್ಟ್ ಜಾರಿಗೆ ಬಂದನಂತರ ಮೊಟಕಾಗಿರುವುದು, ಸರ್ಕಾರದ ಗಮನಕ್ಕೆ ಬಂದಿದೆಯೆ ;

ಆ) ಹಾಗಿದ್ದರೆ ರೈತರಿಗೆ ಈ ಮೊಟಕಾಗಿರುವ ಹಕ್ಕನ್ನು ಊರ್ಜಿತ ಗೊಳಿಸಲು ಸರ್ಕಾರದವರು ಕೈಕೊಂಡ ಕ್ರಮಗಳೇನು ;

ಇ) ಕೆ.ಎಲ್. ಆಕ್ಟ್‌ನ ಪ್ರಕಾರ ಅನುಭೋಗದಾರನೆಂದು ನೊಂಧಾಯಿಸಲ್ಪಟ್ಟವರಿಗೆ ಈ